C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 118/2019

ದಿನಾಂಕ ಃ 14.06.2022 ಪ್ರಮಾಣ ವಚನ ಬೋದಿಸಲಾಗಿದೆ      ಸಿ. ಡಬ್ಲ್ಯೂ ಃ 2 ಪಿ. ಡಬ್ಲ್ಯೂ ಃ 1

| | |
|---|---|
| ಸಾಕ್ಷಿದಾರರ ಹೆಸರು | ಹೇಮಂತ್ ಕುಮಾರ್ |
| ತಂದೆಯ ಹೆಸರು | ನಿಂಗಯ್ಯ |
| ವಯಸ್ಸು | 25 ವರ್ಷ |
| ಉದ್ಯೋಗ | ಎಳನೀರು ವ್ಯಾಪಾರ |
| ವಾಸ | ತೊಪ್ಪನಹಳ್ಳಿ ಗ್ರಾಮ |

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ

1. ಚಾಸಾ-3 ನನ್ನ ಅಣ್ಣ. ಫಿರ್ಯಾದಿ ನನ್ನ ದೊಡ್ಡಪ್ಪನ ಮಗ, ಚಾಸಾ-4 ಮತ್ತು 5 ಸಹ ನನ್ನ ದೊಡ್ಡಪ್ಪನ ಮಕ್ಕಳು. ನನಗೆ ನಮ್ಮ ಊರಿನವರಾದ ಆರೋಪಿಗಳು ಗೊತ್ತು. ಮೊದಲು ನಾನು ನನ್ನ ತಂದೆ ತಾಯಿ ಹಾಗೂ ಅಣ್ಣ ಬೆಂಗಳೂರಿನಲ್ಲಿ 2-3 ವರುಷಗಳ ಕಾಲ ವಾಸವಿದ್ದೆವು. ಆಗ ನನ್ನ ತಂದೆ ಆಟೋ ಚಾಲಕರಾಗಿದ್ದರು. ಚಾಸಾ-3 ನನ್ನ ಅಣ್ಣ ಎಳನೀರು ವ್ಯಾಪಾರ ಹಾಗೂ ಜನರಲ್ ಇನ್ಶ್ಯೂರೆನ್ಸ ಏಜೆಂಟ್ ಆಗಿ ಕಲಸ ಮಾಡುತ್ತಿದ್ದನು. ಆಗ ನಾನು ಫಿರ್ಯಾದಿಯೊಂದಿಗೆ ಎಳನೀರು ವ್ಯಾಪಾರ ಮಾಡುತ್ತಿದ್ದೆ. ನಂತರ ನಾನು ನಮ್ಮ ಸ್ವಂತ ಊರು ತೊಪ್ಪನಹಳ್ಳಿಗೆ ಬಂದು ನನ್ನ ಅಣ್ಣ ಪ್ರಸನ್ನ ನೊಂದಿಗೆ ಎಳನೀರು ವ್ಯಾಪಾರ ಮಾಡುತ್ತಿದ್ದೆ. ಆಗ ನಾನು ಪ್ರಸನ್ನನ ಮನೆಯಲ್ಲಿ ವಾಸವಿದ್ದೆ. ಪ್ರಸನ್ನನ ತಂದೆಗೆ ಫಿರ್ಯಾದಿ ಪ್ರಸನ್ನ ಹಾಗೂ ಮುತ್ತುರಾಜು ಇಬ್ಬರು ಮಕ್ಕಳು.

2. 2015 ರ ಗ್ರಾಮ ಪಂಚಾಯತಿ ಚುನಾವಣೆ ಕಾಲದಿಂದ ನಮ್ಮ ಮತ್ತು ಆರೋಪಿಗಳ ನಡುವೆ ಭಿನ್ನಾಭಿಪ್ರಾಯ ಪ್ರಾರಂಭವಾಯಿತು. ದಿಃ 24-12-2016 ರಂದು ನಾನು ಎಳನೀರು ವ್ಯಾಪಾರ ಮಾಡಿದ ನಂತರ ಮದ್ದೂರಿನ ನನ್ನ ಚಿಕ್ಕಪ್ಪ ದೇವರಾಜು ರವರ ಮನೆಯಲ್ಲಿ ವಾಸವಿದ್ದೆನು. ದಿಃ 25.12.2016 ರಂದು ಬೆಳಗ್ಗೆ 7.15 ರ ಹೊತ್ತಿಗೆ ಚಾಸಾ-13 ಕೋಳಿ ಜಗದೀಶ ರವರು ಯೋಗರಾಜುರವರ ಮೊಬೈಲಿಗೆ ಫೋನ್ ಮಾಡಿದ್ದರು. ಆ ರೀತಿ ಫೋನ್ ಮಾಡಿ ಕುಂಟರಾಜ, ಶಂಕರಣ್ಣನ ಮಗ ಮುತ್ತ, ಶಂಕರಣ್ಣನ ಹೆಂಡತಿ ಲಕ್ಷಿ ಮತ್ತು ಪುಟ್ಟಲಿಂಗಮ್ಮ ಇವರುಗಳು ಪ್ರಸನ್ನನ ಹಣೆಗೆ ಕಲ್ಲಿನಿಂದ ಹೊಡೆದು ಗಾಯವಾಗಿದ್ದು ಪ್ರಸನ್ನನನ್ನು ಮದ್ದೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದೇವೆ, ನೀವು ಅಲ್ಲಿಗೆ ಬನ್ನಿ ಎಂದು ಹೇಳಿದರು. ಆಗ ನಾನು ಮತ್ತು ಚಾಸಾ-10 ಯೋಗರಾಜು ಬೆಳಗ್ಗೆ 10 ಗಂಟೆ ಹೊತ್ತಿಗೆ ಮದ್ದೂರಿನ

ಸರ್ಕಾರಿ ಆಸ್ಪತ್ರೆಗೆ ಹೋದೆವು. ನಾನು ನೋಡಿದಾಗ ಪ್ರಸನ್ನನ ಹಣೆಯ ಎಡಭಾಗಕ್ಕೆ ಏಟಾಗಿದ್ದು ಡಾಕ್ಟರ್ ಹೊಲಿಗೆ ಹಾಕುತ್ತಿದ್ದರು. ಯೋಗರಾಜು ಕೈಯಲ್ಲಿ ಪ್ರಸನ್ನ ದೂರು ಬರೆಸಿ ನನ್ನ ಚಿಕ್ಕಪ್ಪ ಚಾಸಾ-14 ಶಿವರಾಮು ರವರ ಮೂಲಕ ಪೊಲೀಸ್ ಠಾಣೆಗೆ ಕಳುಹಿಸಿದರು. ನಂತರ ವೈದ್ಯರ ಸಲಹೆ ಮೇರೆಗೆ ನನ್ನ ಸಹೋದರ ಪ್ರಸನ್ನನನ್ನು ಶಿವರಾಮು, ಕೋಳಿ ಜಗದೀಶ, ಪುಟ್ಟಸ್ವಾಮಿ, ಕುಂಟೇಗೌಡರ ಮುತ್ತ (ಚಾಸಾ-13, 14, 24 ಮತ್ತು 25) ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋದರು.

3. ಪ್ರಸನ್ನನಿಗೆ ಗಾಯವಾದ ವಿಚಾರವನ್ನು ನಾನು ಬೆಂಗಳೂರಿನಲ್ಲಿದ್ದ ಅಣ್ಣ ಮುತ್ತುರಾಜುವಿಗೆ ಫೋನ್ ಮಾಡಿ ತಿಳಿಸಿದೆನು. ನಂತರ ನಾನು ಸ್ವಾಮಿ ಯೋಗರಾಜು ಹಾಗೂ ಶಿವು ತೊಪ್ಪನಹಳ್ಳಿಯ ನಮ್ಮ ತೋಟದ ಮನೆಗೆ ಬೆಳಗ್ಗೆ 11 ಗಂಟೆ ಸಮಯಕ್ಕೆ ಹೋದೆವು. ಮ. ಸುಮಾರು 1 ಗಂಟೆ ಹೊತ್ತಿಗೆ ನನ್ನ ಅಣ್ಣ ಮುತ್ತುರಾಜು ಹಾಗೂ ಶಿವು 407 ವಾಹನದಲ್ಲಿ ನಮ್ಮ ತೋಟದ ಮನೆಗೆ ಬಂದರು. ನಂತರ ನಾವೆಲ್ಲರೂ ಮದ್ದೂರಿಗೆ ಬಂದೆವು. ನಾವು ಪೊ. ಠಾಣೆಗೆ ಹೋಗಿ ದೂರು ಕೊಟ್ಟ ಬಗ್ಗೆ ಸ್ವೀಕೃತಿ ಪತ್ರವನ್ನು ಪಡೆದೆವು. ನಂತರ ನಾನು, ಯೊಗೇಶ, ಸ್ವಾಮಿ, ಶಿವರಾಜು ಕ್ರಿಸ್ಮಸ್ ಹಬ್ಬದ ಊಟಕ್ಕೆ ನಮ್ಮ ಸ್ನೇಹಿತನ ಮನೆಗೆ ಹೋದೆವು. ಊಟ ಮುಗಿಸಿಕೊಂಡು ಸಂಜೆ 5.00 ಗಂಟೆ ಹೊತ್ತಿಗೆ ನಮ್ಮ ಚಿಕ್ಕಪ್ಪ ಶಿವರಾಮು ರವರ ಮನೆಗೆ ಬಂದೆವು. ಆಗ ನನ್ನ ಅಣ್ಣ ಮುತ್ತುರಾಜ ಶಿವರಾಮು ರವರ ಮನೆಯಲ್ಲಿದ್ದನು. ಆಗ ಅಲ್ಲಿಗೆ ಯೋಗ ಮತ್ತು ಶಿವ ಬಂದರು. ನಂತರ ಸುಮಾರು 5.30 ರ ಹೊತ್ತಿಗೆ ಮೋಟಾರು ಬೈಕಿನಲ್ಲಿ ನಾನು ಮತ್ತು ನನ್ನ ಅಣ್ಣ ಮುತ್ತುರಾಜು, ಹಾಗೂ ಇನ್ನೊಂದು ಬೈಕಿನಲ್ಲಿ ಶಿವರಾಜು ಮತ್ತು ಸ್ವಾಮಿ ತೊಪ್ಪನಹಳ್ಳಿ ಗ್ರಾಮದ ಒಳಗೆ ಹೋದೆವು. ನಾವೆಲ್ಲರೂ ಹಳೇಯ ಆಂಜನೇಯ ದೇವಸ್ಥಾನದ ಬಳಿ ಇದ್ದೆವು. ಆಗ ಅಲ್ಲಿಗೆ ಶಂಕರಣ್ಣನ ಮಗ ಮುತ್ತ ಬಂದನು. ಸದರಿ ಮುತ್ತನು ನಮ್ಮನ್ನು ಕುರಿತು ಏನೋ ಬೋಳಿ ಮಕ್ಕಳಾ ರೌಡಿಗಳಾ ತರಹ ಪೋಸ್ ಕೊಡಲು ಇಲ್ಲಿಗೆ ಬಂದಿದ್ದೀರಾ ಎಂದನು. ಆಗ ಶಿವರಾಜು ಮುತ್ತನಿಗೆ ನನ್ನ ಅಣ್ಣ ಪ್ರಸನ್ನನಿಗೆ ಏಕೆ ಹೊಡೆದೆ ಎಂದು ದೊಣ್ಣೆಯಿಂದ ಹೊಡೆದನು. ಆಗ ಫಿರ್ಯಾದಿ ನಮಗೂ ಹಾಗೂ ಶಿವರಾಜುವಿಗೆ ಬೈದು ಜಗಳ ಬಿಡಿಸಿದನು.

4. ನಂತರ ನಾವೆಲ್ಲರೂ ಅರಳಿ ಮರದ ಬಳಿ ಹೋಗಿ ನಿಂತಿದ್ದೆವು. ಆಗ ಸಮಯ ಸಂಜೆ 6.30 ಆಗಿತ್ತು. ಆಗ ನಮ್ಮ ಊರಿನ ಚೆನ್ನೇಗೌಢ ಮಹೇಂದ್ರ , ಮುತ್ತುರಾಜು ಅಲಿಯಾಸ್ ಕೋಟಿ, ಕೆಂಗಲ್ ಗೌಡ, ಮುತ್ತುರಾಜು, ನಂದೀಶ, ಪ್ರಕಾಶ, ಉಮೇಶ, ಮಹದೇವ, ಕುಮಾರ, ಪುಟ್ಟರಾಮು, ಶಿವಲಿಂಗಯ್ಯ, ಸಿಂಧು, ಅರುಣ, ಕುಂಟರಾಜ, ಮುತ್ತು ಹಾಗೂ ಇತರರು ಗುಂಪು ಕಟ್ಟಿಕೊಂಡು ಬಂದು ಅರಳಿ ಮರದ ಬಳಿ ನಿಂತುಕೊಂಡರು.

5. 1 ನೇ ಆರೊಪಿ ಚನ್ನೇಗೌಡ ನಮ್ಮನ್ನು ನೋಡಿ ಏನೋ ಬೋಳಿ ಮಕ್ಕಳಾ Complaint ಕೊಟ್ಟು ಏನು ಮಾಡಿಕೊಂಡಿರಿ, ನಿಮ್ಮ ಕೈಯಲ್ಲಿ ಏನೂ ಆಗಲ್ಲ ಗಾಂಡು ನನ್ನ ಮಕ್ಕಳಾ ಎಂದು ಬಾಯಿಗೆ ಬಂದಂತೆ ಬೈದನು. ಆಗ ಶಿವರಾಜು 1 ನೇ ಆರೋಪಿಗೆ ಏನಣ್ಣ ನಮಗೆ ಹಿಂಗೆ ಬೈಯುತ್ತೀಯಾ ಎಂದು ಕೇಳಿದನು. ಆಗ 1 ನೇ ಆರೊಪಿ ನೀನು ನನ್ನ ಸ್ನೇಹಿತ ಎಂದು ಹೇಳುತ್ತಿದ್ದೇನೆ, ನಿನ್ನ ಮನೆಯವರನ್ನೆಲ್ಲಾ ಇಲ್ಲಿಂದ ಕರೆದುಕೊಂಡು ಹೋಗು, ಇಲ್ಲ ಅಂದರೆ ನಿಮ್ಮನ್ನು ಎಲ್ಲಾ ಕೊಚ್ಚಿ ಸಾಯಿಸಿಬಿಡುತ್ತೇವೆ ಎಂದು ಹೇಳಿದನು. ಆಗ ಆರೋಪಿ ಕೆಂಗಲ್ ಗೌಡ ಮುತ್ತನ ಮೇಲೆ ಏಕೆ ಗಲಾಟೆಗೆ ಹೋಗಿದ್ದೀರಿ, ಆ ಚಿಕ್ಕ ಹುಡುಗನ ಮೇಲೆ ಏಕೆ ಗಲಾಟೆಗೆ ಹೋಗಿದ್ದೀರಿ ಧಮ್ಮು ಇದ್ದರೆ ನಮ್ಮ ಮೇಲೆ ಗಲಾಟೆಗೆ ಬನ್ನಿ ಎಂದು ಹೊಡೆಯಲು ಬಂದನು.

6. ಆಗ ಶಿವರಾಜು ಮುತ್ತನಿಗೆ ಹೊಡೆದಿರುವುದನ್ನು ನೀವು ಯಾಕೆ ಕೇಳುತ್ತೀರಾ ಅವರ ಮನೆಯವರು ಇಲ್ಲವಾ ಎಂದು ಕೇಳಿದನು. ಆಗ 1 ನೇ ಆರೊಪಿ ಮುತ್ತ ನನ್ನ ಫ್ರೆಂಡು ಮಗ ಅದಕ್ಕೆ ಕೇಳಿದೆ ಅಂತ ಹೇಳಿದನು. ಆಗ ಶಿವರಾಜು ನಿಮ್ಮ ಫ್ರೆಂಡು ಮಗನ ವಹಿಸಿಕೊಂಡು ನೀವು ಮಾತನಾಡಬಹುದು , ನನ್ನ ಅಣ್ಣನಿಗೆ ಹೊಡೆದಿರುವ ವಿಚಾರ ನಾನು ಕೇಳಬಾರದ ಎಂದು ಕೇಳಿದನು. ಆಗ ನನ್ನ ಅಣ್ಣ ಮತ್ತುರಾಜು ಆ ಚಿಕ್ಕ ಹುಡುಗ ನನ್ನ ತಮ್ಮನಿಗೆ ಹೊಡೆದು ತಲೆಗೆ ಹೊಲಿಗೆ ಹಾಕಿದ್ದಾರೆ, ಅವಾಗ ಎಲ್ಲಿ ಹೋಗಿದ್ದಿರಿ ಇವಾಗ ನಮ್ಮ ಮೇಲೆ ಜಗಳಕ್ಕೆ ಬಂದಿದ್ದೀರಾ ಎಂದು ಕೇಳಿದ.

7. ಆರೋಪಿ ಚನ್ನೇಗೌಡ ಊರಲ್ಲಿ ನಿಮ್ಮನ್ನು ಸುಮ್ಮನೆ ಬಿಡುತ್ತೇವೆ ಅಂತ ಅಂದುಕೊಂಡಿರಾ, ಬೋಳಿ ಮಕ್ಕಳಾ ನಿಮಗೆಲ್ಲಾ ಏಏನು ಮಾಡುತ್ತೀವಿ ನೋಡಿ ಎಂದು ಹೇಳಿ ಅಲ್ಲಿ ಇದ್ದ ಸುಮಾರು 3-4 ಅಡಿ ಉದ್ದದ ಟಮೆಟೋ ದಡಿಗಳನ್ನು ತಂದು ನನ್ನ ಅಣ್ಣ ಮುತ್ತುರಾಜುವಿನ ತಲೆಯ ಬಲಭಾಗ ಮತ್ತು ಹಿಂಭಾಗಕ್ಕೆ ಹೊಡೆದನು. 1 ನೇ ಆರೋಪಿ ಬನ್ರೋ ಎಲ್ಲಾ ಈ ನನ್ನ ಮಕ್ಕಳನ್ನು ಸಾಯಿಸೋಣಾ ಎಂದು ಜೋರಾಗಿ ಕೂಗುತ್ತಿದ್ದನು. ಆಗ 2 ನೇ ಆರೋಪಿ ಮಹೇಂದ್ರ ಟಮೆಟೋ ದಡಿ ತಂದು ಮುತ್ತುರಾಜನ ತಲೆಯ ಎಡಭಾಗಕ್ಕೆ ಹೊಡೆದನು. 3 ನೇ ಆರೋಪಿ ಕೆಂಗಲ್ ಗೌಡ ಟಮೆಟೋ ದಡಿಯಿಂದ ಮುತ್ತುರಾಜನಿಗೆ ಹೊಡಯಲು ಬಂದಾಗ ಮುತ್ತುರಾಜು ತನ್ನ ಎಡಗೈ ಅಡ್ಡಕೊಟ್ಟಾಗ ಟಮೆಟೋ ದಡಿಯಿಪಿಂದ ಆತನ ಎಡ ಮೊಣಗೈಗೆ ಹೊಡೆದನು. ನಾನು ನನ್ನ ಅಣ್ಣ ಮುತ್ತುರಾಜುನನ್ನು ಬಿಡಿಸಿಕೊಳ್ಳಲು ಹೋದಾಗ 2 ನೇ ಆರೋಪಿ ಮಹೇಂದ್ರ ಟಮೆಟೋ ದಡಿಯಿಂದ ನನ್ನ ಎಡ ಮೊಣಕೆಏಗೆ ಚುಚ್ಚಿದನು. 9 ನೇ ಆರೋಪಿ ಸಿಂಧು ಕುಮಾರ ಟಮೆಟೋ ದಡಿಯಿಂದ ನನ್ನ ತಲೆಯ ಎಡಭಾಗಕ್ಕೆ ಹೊಡೆದನು. ನನ್ನ ಜೊತೆಯಲ್ಲಿದ್ದ ಚಾಸಾ-3 ಶಿವುವಿನ ಬೆನ್ನು ಮತ್ತು ಕುಂಡಿಗೆ ಆರೋಪಿ ಮುತ್ತ ಹೊಡೆದನು.

8. ಸ್ಥಳದಲ್ಲಿ ಸುಮಾರು 50-60 ಜನ ಸೇರಿದರು. ಆಗ ಆರೋಪಿಗಳು ನನಗೂ ಹಾಗೂ ನನ್ನ ಕುಟುಂಬದವರಿಗೆ ಬಾಯಿಗೆ ಬಂದಂತೆ ಬೈದರು ಹಾಗೂ ಇವರನ್ನು ಹೀಗೆ ಬಿಡಬಾರದು ಇವರನ್ನು ಸಾಯಿಸಬೇಕು ಎಂದು ಎಲೆಕ್ಷನ್‌ನಲ್ಲಿ ಗೆದ್ದಾಗಿನಿಂದ ಇವರದು ಜಾಸ್ತಿಯಾಗಿದೆ ಎಂದು ಹೇಳಿದರು ಹಾಗೂ ಜೊತೆಯಲ್ಲಿದ್ದ ನನ್ನ ಅಣ್ಣತಮ್ಮಂದಿರಿಗೆ ಹೊಡೆದರು. ಚಾಸಾ-3 ಶಿವಣ್ಣ ನನ್ನನ್ನು ಹಾಗೂ ನನ್ನ ಅಣ್ಣ ಮುತ್ತುರಾಜು ರವರನ್ನು ಮದ್ದೂರಿನ ಆಸ್ಪತ್ರೆಗೆ ಬೈಕಿನಲ್ಲಿ ಕರೆದುಕೊಂಡು ಹೋದನು.

9. ರಾತ್ರಿ 9 ಗಂಟೆವರೆಗೂ ನಾವು ಮದ್ದೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆವು. ನಂತರ ಮದ್ದೂರು ಪೋಲಿಸರು ನಮ್ಮನ್ನು ಆಸ್ಪತ್ರೆಯಿಂದ ಪೋಲಿಸ್ ಠಾಣೆಗೆ ಕರೆದುಕೊಂಡು ಹೋದರು. ಮುತ್ತುರಾಜು ಅಲಿಯಾಸ್ ಕೋಟಿ ಹಾಗೂ ನಂದೀಶನ ಕೊಲೆಯಾದ ವಿಚಾರದಲ್ಲಿ ಪೋಲಿಸರು ಆ ರೀತಿ ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ದಿನ ನಾನು ಸಾಕ್ಷ್ಯ ನುಡಿದ ವಿಚಾರಗಳನ್ನು ಪೋಲಿಸರಿಗೆ ಹೇಳಿರುತ್ತೇನೆ.

<u>ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ. ಪಿ ಎನ್ ಕೆ ವಕೀಲರಿಂದ :</u>

10. ನನ್ನ ವಿರುದ್ಧ 2 ಕೊಲೆ ಪ್ರಕರಣಗಳ ಕೇಸು ದಾಖಲಾಗಿದೆ. ಆ 2 ಪ್ರಕರಣಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣಗಳು ನನ್ನ ವಿರುದ್ಧ ದಾಖಲಾಗಿಲ್ಲ. ಮುತ್ತುರಾಜು ಹಾಗೂ ನಂದೀಶನ ಕೊಲೆ ಪ್ರಕರಣದಲ್ಲಿ ನಾನು ಒಬ್ಬ ಆರೋಪಿ ಎಂದರೆ ಸರಿ. ಸದರಿ ಕೊಲೆ ಪ್ರಕರಣದಲ್ಲಿ ಈ ಕೇಸಿನ ಫಿರ್ಯಾದಿ 1ನೇ ಆರೋಪಿ ಎಂದರೆ ಸರಿ. ಈ ಪ್ರಕರಣದ ಚಾಸಾ-3, 4-ಸ್ವಾಮಿ .ಡಿ 5- ಶಿವರಾಜು, 9- ಶಿವಲಿಂಗಯ್ಯ, 12-ದೀಪಕ್, 13-ಜಗದೀಶ ಅಲಿಯಾಸ್ ಕೋಳಿ, 14-ಶಿವರಾಮು ಸದರಿ ಕೊಲೆ ಪ್ರಕರಣದ ಆರೋಪಿಗಳು ಎಂದರೆ ಸಾಕ್ಷಿ ಚಾಸಾ-9 ಶಿವಲಿಂಗಯ್ಯನನ್ನು ಹೊರತುಪಡಿಸಿ ಉಳಿದವರು ಸದರಿ ಪ್ರಕರಣದ ಆರೋಪಿಗಳು ಎಂದು ನುಡಿದಿದ್ದಾರೆ.

11. ನಾನು ಚಿಕ್ಕ ಹುಡುಗನಾಗಿದ್ದಾಗ ನಾವು ಬೆಂಗಳೂರಿಗೆ ವಾಸಿಸಲು ಹೋಗಿರುತ್ತೇವೆ. ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ಬೆಂಗಳೂರಿನಲ್ಲಿ ವಾಸ ಇದ್ದುದರಿಂದ ನನಗೆ ತೊಪ್ಪನಹಳ್ಳಿಯ ವ್ಯವಹಾರಗಳ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ, ವೋಟರ್ ಐ ಡಿ ಬೆಂಗಳೂರಿನ ವಿಳಾಸದಲ್ಲಿದೆ ಎಂದರೆ ಸಾಕ್ಷಿ ನನ್ನ ಆಧಾರ್ ಕಾಡ್, ಪಾನ್ ಕಾರ್ಡ ತೊಪ್ಪನಹಳ್ಳಿಯ ವಿಳಾಸದ್ದಾಗಿದೆ ಹಾಗೂ ನನಗೆ ವೋಟರ್ ಐ ಡಿ ಇಲ್ಲ ಎಂದು ನುಡಿದಿದ್ದಾರೆ. ನಾನು ಬೆಂಗಳೂರಿನ ವಿಳಾಸದ ವೋಟರ್ ಐ ಡಿ ಹೊಂದಿದ್ದು ಅಲ್ಲಿ ಮತವನ್ನು ಚಲಾಯಿಸಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ನನಗೂ ತೊಪ್ಪನಹಳ್ಳಿಯ ಚುನಾವಣೆಗೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. 2015 ರ ಗ್ರಾಮ ಪಂಚಾಯತಿ ಚುನಾವಣೆ ವಿಚಾರದಲ್ಲಿ ನಮ್ಮ ಮತ್ತು ಆರೋಪಿಗಳ ನಡುವೆ ಭಿನ್ನಾಭಿಪ್ರಾಯ ಪ್ರಾರಂಭವಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ತೊಪ್ಪನಹಳ್ಳಿಯಲ್ಲಿ 2 ಗುಂಪುಗಳು ಇರಲಿಲ್ಲ ಹಾಗೂ ಚುನಾವಣೆ ವಿಚಾರದಲ್ಲಿ ಯಾವುದೇ ಗಲಾಟೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಂಗಡಿಗರು ನೀರು ಬಿಡುವ ವಿಚಾರದಲ್ಲಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ನೀರು ಬಿಡುವ ವಿಚಾರದಲ್ಲಿ ಗಲಾಟೆ ಮಾಡಿದ್ದು ಕುಂಟರಾಜು ಎಂದು ಸಾಕ್ಷಿ ಸ್ವತಃ ನುಡಿದಿದ್ದಾರೆ.

13. ನೀರು ಬಿಡುವ ವಿಚಾರದಲ್ಲಿ ಆದ ಗಲಾಟೆಯನ್ನು ನಾವು ದೊಡ್ಡದು ಮಾಡಿಕೊಂಡು ಗುಂಪು ಕಟ್ಟಿಕೊಂಡು ಮಾರಾಕಾಸ್ತ್ರಗಳಿಂದ ಕೊಲೆ ಮಾಡಲು ಸಂಚು ಮಾಡಿದೆವು ಎಂದರೆ ಸರಿಯಲ್ಲ. ದಿಃ 25.12.2016 ರಂದು ಕ್ರಿಸ್ಮಸ್ ಊಟಕ್ಕೆ ಹೋಗಿದ್ದ ಸಮಯದಲ್ಲಿ ನಾನು ಹಾಗೂ ಎಸ್ ಸಿ 82/2017 ರ ಇತರೆ ಆರೋಪಿಗಳು ಗುಂಪು ಕಟ್ಟಿಕೊಂಡು ಮುತ್ತುರಾಜು ಹಾಗೂ ನಂದೀಶನ ಕೊಲೆ ಮಾಡಲು ಸಂಚು ಮಾಡಿದೆವು ಎಂದರೆ ಸರಿಯಲ್ಲ.

14. ನಾವು ಕ್ರಿಸ್ಮಸ್ ಊಟಕ್ಕೆ ಹೋಗಿ ವಾಪಸ್ಸು ಬಂದ ತೋಟದ ಮನೆಗೂ ಮೇಲೆ ಹೇಳಿದ ಅರಳಿ ಮರಕ್ಕೂ 1 ಕಿಮಿ ಅಂತರವಿದೆ. ಆ ದಿನ ನಾವು ಮದ್ದೂರಿನ ನನ್ನ ಸ್ನೇಹಿತನ ಮನೆಗೆ ಕ್ರಿಸ್ಮಸ್ ಊಟಕ್ಕೆ ಹೋಗಿದ್ದೆವು. ಮದ್ದೂರಿನಿಂದ ಬರುವಾಗ ಮೊದಲು ಸಿಗುವುದು ನಮ್ಮ ಫಾರಂ ಹೌಸ್ ಎಂದರೆ ಸರಿ. ಸದರಿ ಫಾರಂ ಹೌಸ್ ನಲ್ಲಿ ನಾವುಗಳು ಮಾರಾಕಾಸ್ತ್ರಗಳನ್ನು ಇಟ್ಟುಕೊಂಡು ಕೊಲೆ ಮಾಡಲು ಸಂಚು ರೂಪಿಸಿಕೊಂಡು ಅರಳಿ ಮರದ ಬಳಿ ಬಂದೆವು ಎಂದರೆ ಸರಿಯಲ್ಲ.

15. ದಿಃ 25.12.2016 ರಂದು ಬೆಳಗ್ಗೆ 6.30 ರ ಹೊತ್ತಿಗೆ ಪ್ರಸನ್ನ ಪೋಲಿಸರಿಗೆ ದೂರು ಕೊಟ್ಟಿದ್ದು ಎಂದರೆ ಸರಿಯಲ್ಲ. ಸದರಿ ದೂರು ಕೊಟ್ಟಾಗ ಸಮಯ ಬೆಳಗ್ಗೆ 8.00 ಗಂಟೆ ನಂತರದ್ದಾಗಿತ್ತು ಎಂದು ಸಾಕ್ಷಿ ಸ್ವತಃ ನುಡಿದಿದ್ದಾರೆ. ಸದರಿ ದೂರು ಕೊಡುವುದಕ್ಕೂ ಮೊದಲು ಪುಟ್ಟಲಿಂಗಮ್ಮ ಎನ್ನುವವರು ಪ್ರಸನ್ನ, ಜಗದೀಶ, ಕುಮಾರ, ಶಿವರಾಮು, ಪುಟ್ಟಸ್ವಾಮಿ ಇವರುಗಳ ವಿರುದ್ದ ಹಲ್ಲೆಯ ಬಗ್ಗೆ ದೂರೊಂದನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರಸನ್ನ ದೂರು ಕೊಟ್ಟ ನಂತರ ಪುಟ್ಟಲಿಂಗಮ್ಮ ಸದರಿ ದೂರು ಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದಾರೆ. ನಮ್ಮ ಕೇಸಿಗೆ ಅನುಕೂಲವಾಗಲಿ ಎಂದು ಪುಟ್ಟಲಿಂಗಮ್ಮ ಕೊಟ್ಟಿದ್ದ ದೂರಿನ ಸಂಖ್ಯೆಯನ್ನು ಬದಲಾಯಿಸಿ ಪ್ರಸನ್ನ ಕೊಟ್ಟಿದ್ದ ದೂರು ಪುಟ್ಟಲಿಂಗಮ್ಮ ನಿಗೂ ಮೊದಲೇ ಕೊಟ್ಟ ದೂರು ಎನ್ನುವಂತೆ ಬಿಂಬಿಸಿರುತ್ತೇವೆ ಎಂದರೆ ಸರಿಯಲ್ಲ.

16. 25.12.2016 ರಂದು ಸಂಜೆ 6.45 ರ ಸಮಯದಲ್ಲಿ ಹೊನ್ನಯ್ಯ. ಟಿ. ಹೆಚ್ ರವರು ತೊಪ್ಪನಹಳ್ಳಿಯ ಶಂಕರ ಮಗ ಮಂಜಣ್ಣನ ಮನೆಯ ಮುಂದೆ ಬರುತ್ತಿದ್ದಾಗ ಎಸ್ ಸಿ 82/2017 ರ ಆರೋಪಿಗಳಾದ ನಾನು ಮತ್ತು ಇತರರು 3 ಮೋಟಾರು ಸೈಕಲ್ಲುಗಳಲ್ಲಿ ಕೈಗಳಲ್ಲಿ ಚಾಕುಗಳನ್ನು ಹಿಡಿದುಕೊಂಡು ಮುತ್ತುರಾಜುವಿಗೆ ಏಕೆ ಹೊಡೆದೆ ಎಂದು ಹೇಳಿ ಗಲಾಟೆ ತೆಗೆದು ಸದರಿ ಹೊನ್ನಯ್ಯ ರವರಿಗೆ ಕೈಗಳಿಂದ ಹೊಡೆದು, ಕಾಲಿನಿಂದ ತುಳಿದು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಅಲ್ಲಿಂದ ಮುಂದಕ್ಕೆ ಹೋಗಿ ನಿರಾಯುಧರಾಗಿದ್ದ ಮುತ್ತುರಾಜು, ನಂದೀಶ ಹಾಗೂ ಇತರರ ಮೇಲೆ ಚಾಕು, ದೊಣ್ಣೆ ಹಾಗೂ ಮಚ್ಚುಗಳಿಂದ ನಾನು ಮತ್ತು ಎಸ್ ಸಿ 82/2017 ರ ಇತರೆ ಆರೋಪಿಗಳು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ 407 ವಾಹನದಲ್ಲಿ ಬಂದ ಈ ಕೇಸಿನ ಫಿರ್ಯಾದಿ ಹಾಗೂ ಇತರರು ವಾಹನದಲ್ಲಿದ್ದ ಮಾರಾಕಾಸ್ತ್ರಗಳಿಂದ ಅರಳಿ ಕಟ್ಟೆಯ ಮೇಲೆ ಕುಳಿತಿದ್ದ ಮುತ್ತುರಾಜು, ನಂದೀಶ ಮತ್ತು ಇತರರ ಮೇಲೆ ಏಕಾಏಕಿ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ಆ ಗಲಾಟೆಯಲ್ಲಿ ನಾವು ಬೀಸುತ್ತಿದ್ದ ಆಯುಧಗಳಿಂದ ಕೈ ತಪ್ಪಿ (miscued) ಪರಸ್ಪರ ನಮಗೆ ಆದ ಗಾಯಗಳ ಸಂದರ್ಭಗಳನ್ನು ಉಪಯೋಗಿಸಿಕೊಂಡು ಆರೋಪಿಗಳ ವಿರುದ್ದ ಈ ಪ್ರಕರಣದ ಸುಳ್ಳು ಆರೋಪ ಮಾಡಿರುತ್ತೇವೆ ಎಂದರೆ ಸರಿಯಲ್ಲ.

17. ಈ ಪ್ರಕರಣದಲ್ಲಿ ಕೊಟ್ಟಿರುವಂತಹ ಸುಳ್ಳು ದೂರು ಕೊಟ್ಟು ಸಾಧ್ಯವಾದರೆ ನಮ್ಮ ವಿರುದ್ದ ದಾಖಲಾಗಿರುವ ಕೊಲೆ ಪ್ರಕರಣದಿಂದ ಹೊರಬರುವ ಪ್ರಯತ್ನವನ್ನು ನಾನು ಮತ್ತು ನನ್ನ ಸಹಚರರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸದರಿ ಅರಳಿ ಮರದ ಹತ್ತಿರ ಯಾವುದೇ ಟಮೆಟೋ ದಡಿಗಳು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಟಮೆಟೋ ದಡಿಯಿಂದ ಮುತ್ತುರಾಜು ರವರ ತಲೆ ಹಾಗೂ ಕೈಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಹೇಂದ್ರರವರು ಮುತ್ತುರಾಜುವಿನ ತಲೆಗೆ ಟಮೆಟೋ ದಡಿಯಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಕೆಂಗಲ್ ಗೌಡ ರವರು ಟಮೆಟೋ ದಡಿಯಿಂದ ನನಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ-9 ಸಿಂಧು ಕುಮಾರ್ ರವರು ಟಮೆಟೋ ದಡಿಯಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಡೆಯವರು ಆಯುಧಗಳನ್ನು ಬೀಸುವಾಗ ನನಗೂ ಹಾಗೂ ಇತರೆ ಈ ಪ್ರಕರಣದ ಗಾಯಾಳುಗಳಿಗೆ ಗಾಯವಾಗಿದೆ ಎಂದರೆ ಸರಿಯಲ್ಲ.

18. ನನ್ನನ್ನು ದಸ್ತಗಿರಿ ಮಾಡಿದ ದಿನ ರಾತ್ರಿಯೇ ಪೋಲಿಸರು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಾನು ಯಾವುದೇ ಹೇಳಿಕೆಯನ್ನು ಪೋಲಿಸರ ಮುಂದೆ ನೀಡಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.